# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

**ಕವಿಪ್ರನಿನಿ ಮತ್ತು ವಿಸಕಂಗಳ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆ ಘಟಕ**

**ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009.**

**ವಿಷಯ:** ದಿನಾಂಕ:01.04.2018 ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ ಎನ್‌ಪಿಎಸ್ ನೌಕರರ ನಾಮನಿರ್ದೇಶಿತರ ಆಯ್ಕೆ ಮೇರೆಗೆ ಕುಟುಂಬ ಪಿಂಚಣಿ ಮಂಜೂರು ಮಾಡುವ ಸಂದರ್ಭದಲ್ಲಿ ನೌಕರರ ಪಿಂಚಣಿ ವಂತಿಗೆ ಮತ್ತು ಅದರ ಮೇಲಿನ ಆದಾಯವನ್ನು ಮೃತರ ನಾಮನಿರ್ದೇಶಿತರಿಗೆ ಹಿಂದಿರುಗಿಸುವ ಬಗ್ಗೆ.

**ಓದಲಾಗಿದೆ:**

1. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಸ್ಪೇ) 04 ಪಿಇಟಿ 2005 ದಿನಾಂಕ:31.03.2006.
2. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:05.07.2007.
3. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 03 ಸೇನಿಸೇ 2010 ದಿನಾಂಕ:12.10.2010.
4. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:29.08.2011.
5. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ(ಸ್ಪೇ) 203 ಪಿಇಎನ್ 2012(ಪಿ) ದಿನಾಂಕ:18.05.2016.
6. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018 ದಿನಾಂಕ:23.06.2018
7. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್/ಬಿ93/36012/2018-19 ದಿನಾಂಕ:19.07.2019.
8. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ/ಬಿ93/36012/2020-21 ದಿನಾಂಕ:25.11.2020.
9. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/264/2021 ದಿನಾಂಕ:30.05.2022.
10. ದಿನಾಂಕ:27.12.2022 ರಂದು ನಡೆದ ಕವಿಪ್ರನಿನಿಯ 137ನೇ ನಿರ್ದೇಶಕರ ಮಂಡಳಿ ಸಭೆಯ ನಿರ್ಣಯ ಸಂಖ್ಯೆ:137/15.
11. ಕಂಪನಿ ಕಾರ್ಯದರ್ಶಿ, ಕವಿಪ್ರನಿನಿ ರವರ ಅಂತರ ಕಛೇರಿ ಟಿಪ್ಪಣಿ ಸಂಖ್ಯೆ: ಕವಿಪ್ರನಿನಿ/ಬಿ37/137ಬಿಎಮ್/2022-23/1217 ದಿನಾಂಕ:27.03.2023.

*****

**ಪ್ರಸ್ತಾವನೆ:-**

ದಿನಾಂಕ:01.04.2006 ರಂದು ಅಥವಾ ತರುವಾಯ ಸರ್ಕಾರಿ ಸೇವೆಗೆ ಸೇರುವ ಎಲ್ಲಾ ರಾಜ್ಯ ಸರ್ಕಾರಿ ನೌಕರರಿಗೆ ನೂತನ ಪಿಂಚಣಿ ಯೋಜನೆಯನ್ನು, ದಿನಾಂಕ:31.03.2006ರ ಆದೇಶದಲ್ಲಿ ಕರ್ನಾಟಕ ಸರ್ಕಾರವು ಜಾರಿಗೊಳಿಸಿದ ಹಿನ್ನೆಲೆಯಲ್ಲಿ, ಕವಿಪ್ರನಿನಿ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:05.07.2007 ರಲ್ಲಿ ಕವಿಪ್ರನಿನಿ/ಎಲ್ಲಾ ವಿಸಕಂಗಳಲ್ಲಿ ದಿನಾಂಕ:01.04.2006 ರಂದು ಅಥವಾ ನಂತರ ಸೇವೆಗೆ ಸೇರಿರುವ/ಸೇರುವ ಎಲ್ಲಾ ಅಧಿಕಾರಿ/ನೌಕರರಿಗೆ ನೂತನ ವ್ಯಾಖ್ಯಾನಿತ ಅಂಶದಾಯಿ ಕೊಡುಗೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸಿ, ಕರ್ನಾಟಕ ಸರ್ಕಾರವು ಕಾಲಕಾಲಕ್ಕೆ ಹೊರಡಿಸುವ ಸದರಿ ಯೋಜನೆಯ ಆದೇಶಗಳನ್ನು ಕವಿಪ್ರನಿನಿಯಲ್ಲಿ ಅಳವಡಿಸಿಕೊಳ್ಳಲಾಗುತ್ತಿದೆ.

ಈ ಯೋಜನೆಯನ್ವಯ ನಿಗಮ/ಎಸ್ಕಾಂಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರ ವೇತನದಿಂದ ಶೇ.10ರಷ್ಟು ನೌಕರರ ಪಿಂಚಣಿ ವಂತಿಗೆಯನ್ನು [ಮೂಲ ವೇತನ + ಡಿಯರ್‌ನೆಸ್ ಪೇ (ಅನ್ವಯಿಸಿದಲ್ಲಿ)] ಮತ್ತು

ತುಟ್ಟಿ ಭತ್ಯೆ] ಕಡಿತಗೊಳಿಸಿ ಸಂಬಂಧಪಟ್ಟ ನಿಗಮ/ವಿಸಕಂಗಳು ಅದಕ್ಕೆ ಸಮನಾದ ಕೊಡುಗೆಯನ್ನು ಅಧಿಕಾರಿ/ನೌಕರರ ಪಿಪಿಎ ಖಾತೆಗೆ ಜಮೆಮಾಡಲಾಗುತ್ತಿತ್ತು. ನಿಗಮದ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ:13.09.2019ರನ್ವಯ ಉದ್ಯೋಗದಾತರ ವಂತಿಗೆಯನ್ನು ಶೇ.10 ರಿಂದ ಶೇ.14ಕ್ಕೆ ದಿನಾಂಕ:01.04.2019 ರಿಂದ ಜಾರಿಗೆ ಬರುವಂತೆ ಹೆಚ್ಚಿಸಿದೆ.

ಕರ್ನಾಟಕ ಸರ್ಕಾರವು ಆದೇಶ ಸಂಖ್ಯೆ: ಆಇ 03 ಸೇನಿಸೇ 2010 ದಿನಾಂಕ:12.10.2010ರಲ್ಲಿ ಎನ್‌ಪಿಎಸ್ ನೌಕರರಿಗೆ ಇಡಿಗಂಟು ಪರಿಹಾರದ ಸೌಲಭ್ಯವನ್ನು ವಿಸ್ತರಿಸಿದ ಹಿನ್ನೆಲೆಯಲ್ಲಿ, ಸದರಿ ಆದೇಶವನ್ನು ನಿಗಮದಲ್ಲಿಯೂ ಸಹ ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಬಿ14/4977/2005-06 ದಿನಾಂಕ29.08.2011ರಲ್ಲಿ ಅಳವಡಿಸಿಕೊಂಡು ಸೇವೆಯಲ್ಲಿರುವಾಗಲೇ ಮೃತರಾದ ಅಧಿಕಾರಿ/ನೌಕರರ ನಾಮನಿರ್ದೇಶಿತರು/ವಾರಸುದಾರರಿಗೆ ಇಡಿಗಂಟು ಪರಿಹಾರವನ್ನು ಪಾವತಿಸಲಾಗುತ್ತಿತ್ತು.

ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ 34 ಪಿಇಎನ್ 2018 ದಿನಾಂಕ:23.06.2018ರಲ್ಲಿ, ದಿನಾಂಕ:01.04.2018 ರಂದು/ನಂತರ ನಿವೃತ್ತಿ ಹೊಂದಿದ/ಹೊಂದುವ ಸರ್ಕಾರಿ (ಎನ್‌ಪಿಎಸ್) ನೌಕರರಿಗೆ ನಿವೃತ್ತಿ ಉಪದಾನ ಹಾಗೂ ಸೇವೆಯಲ್ಲಿರುವಾಗಲೇ ಮರಣ ಹೊಂದಿದ/ಹೊಂದುವ ನೌಕರರ ಕುಟುಂಬಕ್ಕೆ ಮರಣ ಉಪದಾನ ಮತ್ತು ಕುಟುಂಬ ಪಿಂಚಣಿ ಸೌಲಭ್ಯವನ್ನು ಕೆಲವು ಷರತ್ತುಗಳಿಗೆ ಒಳಪಡಿಸಿ ವಿಸ್ತರಿಸಿದೆ ಮತ್ತು ದಿನಾಂಕ:31.03.2018ರ ನಂತರ ಸೇವೆಯಲ್ಲಿರುವಾಗಲೇ ಮರಣ ಹೊಂದಿದ ನೌಕರರ ನಾಮನಿರ್ದೇಶಿತರಿಗೆ/ಅವಲಂಬಿತರಿಗೆ, ಸರ್ಕಾರದ ಆದೇಶ ದಿನಾಂಕ:12.10.2010ರನ್ವಯ ಪಾವತಿಸುವ ಇಡಿಗಂಟು ಪರಿಹಾರದ ಸೌಲಭ್ಯವನ್ನು ದಿನಾಂಕ:01.04.2018 ರಿಂದ ಜಾರಿಗೆ ಬರುವಂತೆ ಹಿಂಪಡೆಯಲಾಗಿದೆ. ದಿನಾಂಕ:01.04.2018 ರಂದು/ನಂತರ ಮರಣ ಹೊಂದಿದ ನೌಕರರ ಅವಲಂಬಿತ ಕುಟುಂಬಕ್ಕೆ ಕರ್ನಾಟಕ ಸರ್ಕಾರ ನೌಕರರ (ಕುಟುಂಬ ಪಿಂಚಣಿ) ನಿಯಮಗಳು, 2002ರನ್ವಯ ನೌಕರರ ಪ್ರಾನ್ ಖಾತೆಯಲ್ಲಿ ಕ್ರೋಢೀಕೃತವಾದ ಮೊತ್ತವನ್ನು (ನೌಕರರ + ಉದ್ಯೋಗದಾತರ ವಂತಿಗೆ ಮತ್ತು ಗಳಿಸಿದ ಬಡ್ಡಿ) ಸರ್ಕಾರಕ್ಕೆ ಆಧ್ಯರ್ಪಿಸುವ ಷರತ್ತಿಗೊಳಪಟ್ಟು, ಕುಟುಂಬ ಪಿಂಚಣಿಯನ್ನು ಆಯ್ಕೆ ಮಾಡಬಹುದಾಗಿದೆ. ದಿನಾಂಕ:23.06.2018ರ ಕರ್ನಾಟಕ ಸರ್ಕಾರದ ಸದರಿ ಆದೇಶವನ್ನು, ಉಲ್ಲೇಖ (8)ರ ನಿಗಮದ ಆದೇಶದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಈಗ, ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/264/2021 ದಿನಾಂಕ:30.05.2022ರಲ್ಲಿ, ರಾಷ್ಟ್ರೀಯ ಪಿಂಚಣಿ ಯೋಜನೆಗೆ ಒಳಪಡುವ ಸರ್ಕಾರಿ ನೌಕರರು ದಿನಾಂಕ:01.04.2018 ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ/ಮೃತ ಹೊಂದುವ ಸಂದರ್ಭದಲ್ಲಿ ನೌಕರರ ನಾಮನಿರ್ದೇಶಿತರು ಕುಟುಂಬ ಪಿಂಚಣಿಯನ್ನು ಆಯ್ಕೆ ಮಾಡಿಕೊಂಡಲ್ಲಿ, ಪ್ರಾನ್ ಖಾತೆಯಲ್ಲಿ ಶೇಖರಣೆಗೊಂಡಿರುವ ಮೊತ್ತದಲ್ಲಿ ಮೃತ ನೌಕರರ ವಂತಿಗೆ ಮತ್ತು ಅದರ ಮೇಲಿನ ಆದಾಯವನ್ನು ಮೃತರ ನಾಮನಿರ್ದೇಶಿತರಿಗೆ ಹಿಂದಿರುಗಿಸಲು ಹಾಗೂ ಸರ್ಕಾರದ ವಂತಿಗೆ ಮತ್ತು ಅದರ ಮೇಲಿನ ಆದಾಯವನ್ನು ಸರ್ಕಾರದ ಲೆಕ್ಕ ಶೀರ್ಷಿಕೆಗೆ ಜಮೆ ಮಾಡಲು ಆದೇಶಿಸಿದೆ.

ಎನ್‌ಡಿಸಿಪಿಎಸ್‌ನಲ್ಲಿ ಪ್ರಮಾಣಿಕೃತ ನೀತಿಯನ್ನು (standardised policy) ಹೊಂದಲು, ಮೇಲಿನ ಸರ್ಕಾರದ ಆದೇಶ ಸಂಖ್ಯೆ: ಆಇ-ಪಿಇಎನ್/264/2021 ದಿನಾಂಕ:30.05.2022 ಅನ್ನು ಕವಿಪ್ರನಿನಿಯಲ್ಲಿ ಅಳವಡಿಸಿಕೊಳ್ಳಬೇಕಾಗಿರುತ್ತದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ, ದಿನಾಂಕ:27.12.2022 ರಂದು ನಡೆದ 137ನೇ ನಿಗಮದ ನಿರ್ದೇಶಕ ಮಂಡಳಿಯ ಸಭೆಯಲ್ಲಿ ದಿನಾಂಕ:30.05.2022ರ ಸರ್ಕಾರದ ಆದೇಶವನ್ನು ನಿಗಮದಲ್ಲಿಯೂ ಅಳವಡಿಸಿಕೊಳ್ಳಲು ಕಾರ್ಯಸೂಚಿಯನ್ನು ಮಂಡಿಸಲಾಗಿತ್ತು.

ಮೇಲೆ ಓದಲಾದ ಉಲ್ಲೇಖ(9)ರ ಸರ್ಕಾರದ ಆದೇಶದಲ್ಲಿರುವಂತೆ ನೂತನ ಪಿಂಚಣಿ ಯೋಜನೆಗೆ ಒಳಪಡುವ ನಿಗಮ/ಎಸ್ಕಾಂಗಳ ಅಧಿಕಾರಿ/ನೌಕರರು ದಿನಾಂಕ:01.04.2018 ರಂದು ಮತ್ತು ತದನಂತರ ಸೇವೆಯಲ್ಲಿರುವಾಗಲೇ ಮೃತರಾದ/ಮೃತ ಹೊಂದುವ ಸಂದರ್ಭದಲ್ಲಿ ನೌಕರರ ನಾಮನಿರ್ದೇಶಿತರು ಕುಟುಂಬ ಪಿಂಚಣಿಯನ್ನು ಆಯ್ಕೆ ಮಾಡಿಕೊಂಡಲ್ಲಿ, ಮೃತ ನೌಕರನ ಪಿಪಿಎ ಖಾತೆಯಲ್ಲಿ ಕ್ರೋಢೀಕೃತವಾಗಿರುವ ಸಂಚಿತ

ಪಿಂಚಣಿ ಮೊತ್ತದಲ್ಲಿ ಮೃತ ನೌಕರರ ವಂತಿಗೆ ಮತ್ತು ಅದರ ಮೇಲಿನ ಆದಾಯವನ್ನು ಮೃತರ ನಾಮನಿರ್ದೇಶಿತರಿಗೆ ಹಿಂದಿರುಗಿಸಲು ಹಾಗೂ ಉದ್ಯೋಗದಾತರ ವಂತಿಗೆ ಮತ್ತು ಅದರ ಮೇಲಿನ ಆದಾಯವನ್ನು ಜಮೆ ಮಾಡಲು ದಿನಾಂಕ:27.12.2022 ರಂದು ನಡೆದ 137ನೇ ನಿರ್ದೇಶಕ ಮಂಡಳಿಯ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ, ನಿಗಮವು ಈ ಕೆಳಕಂಡ ಆದೇಶವನ್ನು ಹೊರಡಿಸಿದೆ.

**ಆದೇಶ ಸಂಖ್ಯೆ: ಕವಿಪ್ರನಿನಿ/ಬಿ16/ಕೆಇಎನ್‌ಡಿಸಿಪಿಎಸ್‌ಸಿ/ಬಿ93/36012/2023-24 ದಿನಾಂಕ: 06 JUN 2023**

ದಿನಾಂಕ:01.04.2006 ರಂದು ಮತ್ತು ನಂತರ ನಿಗಮ/ವಿಸಕಂಗಳ ಸೇವೆಗೆ ಸೇರಿದ/ಸೇರುವ ನೂತನ ವ್ಯಾಖ್ಯಾನಿಸಿದ ಅಂಶದಾಯಿ ಪಿಂಚಣಿ ಕೊಡುಗೆ ಯೋಜನೆಯಡಿ ಬರುವ ನೌಕರರಿಗೆ ದಿನಾಂಕ:01.04.2018 ರಿಂದ ಜಾರಿಗೆ ಬರುವಂತೆ ಈ ಕೆಳಕಂಡಂತೆ ಮರಣ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ:

1) ಈ ಯೋಜನೆಯ ನಿಧಿ ನಿರ್ವಾಹಕ ಸಂಸ್ಥೆಯಾದ ಎಲ್‌ಐಸಿ(ಪಿ&ಜಿಎಸ್) ರವರಲ್ಲಿ, ಮೃತರ ಪಿಪಿಎ ಖಾತೆಯಲ್ಲಿ ಬಡ್ಡಿ ಸಹಿತ ಕ್ರೋಢೀಕೃತವಾಗಿರುವ ಪಿಂಚಣಿ ವಂತಿಗೆಯಲ್ಲಿ, ನೌಕರರ ಪಾಲಿನ ವಂತಿಗೆಯನ್ನು ಕುಟುಂಬ ಪಿಂಚಣಿ ಆಯ್ಕೆ ಮಾಡಿರುವ ಮೃತ ನೌಕರರ ಅರ್ಹ ವಾರಸುದಾರರಿಗೆ ಹಿಂಪಾವತಿಸುವುದು.
2) ಈ ಯೋಜನೆಯ ನಿಧಿ ನಿರ್ವಾಹಕ ಸಂಸ್ಥೆಯಾದ ಎಲ್‌ಐಸಿ(ಪಿ&ಜಿಎಸ್) ರವರಲ್ಲಿ ಮೃತರ ಪಿಪಿಎ ಖಾತೆಯಲ್ಲಿ ಬಡ್ಡಿ ಸಹಿತ ಕ್ರೋಢೀಕೃತವಾಗಿರುವ ಪಿಂಚಣಿ ವಂತಿಗೆಯಲ್ಲಿ, ಉದ್ಯೋಗದಾತರ ಪಾಲಿನ ವಂತಿಗೆಯನ್ನು ಕವಿಪ್ರನಿನಿ ಮತ್ತು ವಿಸಕಂಗಳ ಎನ್‌ಡಿಸಿಪಿಎಸ್ ಕುಟುಂಬ ಪಿಂಚಣಿ ಟ್ರಸ್ಟ್‌ಗೆ ವರ್ಗಾಯಿಸುವುದು.
3) ಕುಟುಂಬ ಪಿಂಚಣಿ ಇತ್ಯರ್ಥಗೊಳಿಸಲಾದ ಪ್ರಕರಣಗಳಲ್ಲಿ ಎಲ್‌ಐಸಿ(ಪಿ&ಜಿಎಸ್) ಸಂಸ್ಥೆ, ಬೆಂಗಳೂರು ರವರಿಂದ ಟ್ರಸ್ಟ್‌ಗೆ ಈಗಾಗಲೇ ವರ್ಗಾವಣೆಯಾಗಿರುವ ಕ್ರೋಢೀಕೃತ ಪಿಂಚಣಿ ವಂತಿಗೆ (ಬಡ್ಡಿ ಸಹಿತ) ಮೊತ್ತದಲ್ಲಿ ನೌಕರರ ವಂತಿಗೆಯನ್ನು ಹಿಂಪಡೆದು, ಮೃತ ಅಧಿಕಾರಿ/ನೌಕರರ ನಾಮನಿರ್ದೇಶಿತರಿಗೆ/ಅರ್ಹ ವಾರಸುದಾರರಿಗೆ ಮರು ಪಾವತಿಸುವುದು.

ಕರ್ನಾಟಕ ಸರ್ಕಾರವು ಮೇಲ್ಕಂಡ ಸವಲತ್ತುಗಳ ಪಾವತಿಗೆ ಸಂಬಂಧಿಸಿದಂತೆ ಹೊರಡಿಸಲಾಗುವ ಮಾರ್ಗಸೂಚಿಗಳನ್ನು ಸೂಕ್ತವಾಗಿ ಅಳವಡಿಸಿಕೊಳ್ಳಲು ಪ್ರತ್ಯೇಕ ಆದೇಶಗಳನ್ನು ಹೊರಡಿಸಲಾಗುವುದು.

'ಆದೇಶದ ಮೇರೆಗೆ'

ನಿರ್ದೇಶಕರು(ಆ&ಮಾ.ಸಂ),
ಕವಿಪ್ರನಿನಿ

**<u>ಪ್ರತಿಯನ್ನು:</u>**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್
4. ಎಲ್ಲಾ ಮುಖ್ಯ ಇಂಜಿನಿಯರ್, ಕವಿಪ್ರನಿನಿ/ಎಸ್ಕಾಂ.
5. ಹಿರಿಯ ಆಪ್ತ ಕಾರ್ಯದರ್ಶಿಗಳು ರವರು ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ಪ್ರಸರಣ)/ನಿರ್ದೇಶಕರು (ಹಣಕಾಸು)/ನಿರ್ದೇಶಕರು(ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ ರವರ ಮಾಹಿತಿಗಾಗಿ ಕಳುಹಿಸುತ್ತಾ ಆದೇಶದ ಪ್ರತಿಯನ್ನು ನಿರ್ದೇಶಕರುಗಳ ಗಮನಕ್ಕೆ ತರಲು ವ್ಯವಸ್ಥೆ ಮಾಡುವುದು.
6. ಎಲ್ಲಾ ಕಂಪನಿ ಕಾರ್ಯದರ್ಶಿಗಳು, ಕವಿಪ್ರನಿನಿ/ಎಸ್ಕಾಂಗಳು.

**ಅಧೀಕ್ಷಕ ಇಂಜಿನಿಯರ್(ಐ.ಟಿ ಮತ್ತು ಎಂ.ಐ.ಎಸ್) ರವರ ಮಾಹಿತಿಗಾಗಿ ಕಳುಹಿಸುತ್ತಾ ಆದೇಶದ ಪ್ರತಿಯನ್ನು www.kptcl.com>eprasarana ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಕ್ತ ವ್ಯವಸ್ಥೆ ಮಾಡುವುದು.**

7. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪಲೆಕ್ಕನಿಯಂತ್ರಣಾಧಿಕಾರಿ, ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್
9. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿ, ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್/ಕ್ರೋಢೀಕರಣ ಘಟಕ, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.

**ಪ್ರತಿಗಳನ್ನು ಮಾಹಿತಿಗಾಗಿ:**

1. ಶ್ರೀ.ಆರ್.ಹೆಚ್.ಲಕ್ಷ್ಮೀಪತಿ, ಅಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (659) ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
2. ಶ್ರೀ.ಕೆ.ಶಿವಣ್ಣ, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ ಹಾಗೂ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ (659), ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ (ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಡಿಪ್ಲೋಮ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ/ಎಸ್ಕಾಂಗಳ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಧಿಕಾರಿಗಳ ಸಂಘ, ಬೆಂಗಳೂರು.
9. ಪ್ರಧಾನ ಕಾರ್ಯದರ್ಶಿ, ಕವಿಮಂ ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು.